**ದಿಃ 15.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜಿ ಜಿ ಜಿ ರವರಿಂದಃ**

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ, ಅರ್ಜಿಯ ವಿಷಯವನ್ನು ಓದಿ ತಿಳಿದುಕೊಂಡಿದ್ದೇನೆ. ಉಳಿದ ಅರ್ಜಿದಾರರು ನನಗೆ ಬರೆದುಕೊಟ್ಟ ಮೂಲ ಪ್ರತಿಯನ್ನು ಲಗತ್ತಿಸಿಲ್ಲ. ವಾದ ಮಿತ್ರ ನಾತೆಯಿಂದ ಪ್ರಕರಣವನ್ನು ದಾಖಲಿಸಿದ್ದೇನೆ ಎಂದು ಅರ್ಜಿಯಲ್ಲಿ ತಿಳಿಸಿದ್ದೇನೆ. ಎಲ್ಲಾ ಅರ್ಜಿದಾರರು ವಯಸ್ಕರು ಎಂದರೆ ನಿಜ. ಎಲ್ಲರಿಗೂ ಬರಲು ಆಗುವುದಿಲ್ಲ ನಾನು ಅಧಿಕಾರ ಪತ್ರವನ್ನು ಪಡೆದುಕೊಂಡಿದ್ದೇನೆ. ಎದುರುದಾರರು ನಮ್ಮ ಜಾಗದಲ್ಲಿ ಅತಿಕ್ರಮಣ ಮಾಡಲು ಪ್ರಯತ್ನಿಸುತ್ತಿದ್ದರು, ಆದ್ದರಿಂದ ಅರ್ಜಿ ಸಲ್ಲಿಸಿದ್ದೇನೆ. ನಮ್ಮ ಅರ್ಜಿಯಲ್ಲಿ ಯಾವ ಆಸ್ತಿಗೆ ಸಂಬಂಧಿಸಿದಂತೆ ಈ ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದು ತಿಳಿಸಿಲ್ಲ.

ಅಸಲು ದಾವಾ ನಂ. 45/2023 ರಲ್ಲಿ ತಕರಾರು ಸಲ್ಲಿಸಿರುವುದು ನನಗೆ ಗೊತ್ತಿಲ್ಲ. ನಮ್ಮ ವಕೀಲರನ್ನು ವಿಚಾರಿಸಿದ್ದು ತಕರಾರನ್ನು ಸಲ್ಲಿಸಿದ್ದಾರೆ ಎಂದು ತಿಳಿಸಿದ್ದಾರೆ. ತಕರಾರಿನ ಪ್ರತಿಯನ್ನು ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ದಾವೆಯಲ್ಲಿರುವ ಪ್ರತಿವಾದಿಯ ನಂ-1, 3 ಮತ್ತು 6 ರವರನ್ನು ಈ ಅರ್ಜಿಯಲ್ಲಿ ಸೇರಿಸಿಲ್ಲ. ಅವರು ಏನು ಮಾಡಿರುವುದಿಲ್ಲ ಆದ್ದರಿಂದ ಈ ಅರ್ಜಿಯಲ್ಲಿ ಸೇರಿಸಿಲ್ಲ. ಈ ಬಗ್ಗೆ ನಮ್ಮ ಅರ್ಜಿಯಲ್ಲಿ ತಿಳಿಸಿಲ್ಲ. ನಿಪಿ-3 ರಲ್ಲಿ ಆಸ್ತಿಯ ಬಗ್ಗೆ ನಮೂದಿಸಿಲ್ಲ. ಆದರೆ ಅರ್ಜಿಯಲ್ಲಿ ತಿಳಿಸಿದ್ದೇವೆ. ನಮ್ಮ ಅರ್ಜಿಯಲ್ಲಿ ಪ್ಯಾರಾ ನಂ. 15 ಎ ರಲ್ಲಿ ಯಾವ ಉದ್ದೇಶಕ್ಕಾಗಿ ಶಿಕ್ಷಿಸಬೇಕು ಎಂದು ತಿಳಿಸಿಲ್ಲ. ನಾನು ಹಾಜರುಪಡಿಸಿದ ಪೋಟೋಗಳನ್ನು ನೋಡಿದರೆ ಜಮೀನಿನ ಕ್ಷೇತ್ರ, ವಿಸ್ತೀರ್ಣ ಗೊತ್ತಾಗುವುದಿಲ್ಲ. ಪೋಟೋಗಳು ಜಿ.ಪಿ.ಎಸ್. ಆಧಾರಿತ ಅಲ್ಲ. ಪೋಟೋಗಳನ್ನು ಯಾವ ದಿನಾಂಕದಂದು ತೆಗೆಯಲಾಗಿದೆ ಎಂದು ಅದರಲ್ಲಿ ನಮೂದಿಸಿಲ್ಲ ಆದರೆ ಸಿ.ಡಿ.ಯನ್ನು ಹಾಜರುಪಡಿಸಿದ್ದೇನೆ. ನಾನು ಸಿ.ಡಿ.ಗಳಲ್ಲಿರುವ ಪೋಟೋಗಳನ್ನು ಹಾಜರುಪಡಿಸಿದ್ದೇನೆ.

ನ್ಯಾಯಾಲಯದ ಮಧ್ಯಂತರ ಆದೇಶದ ಮುಂಚೆ ಹಾಗೂ ನಂತರದ ಪೋಟೋಗಳು ಎಂದು ಪ್ರತ್ಯೇಕಿಸಿ ಹಾಜರುಪಡಿಸಿಲ್ಲ. ಆದೇಶಕ್ಕಿಂತ ಪೂರ್ವದಲ್ಲಿ ಬಣವೆಗಳು ಇರಲಿಲ್ಲ ಎಂದು ತೋರಿಸಲು ದಾಖಲೆಗಳನು ಹಾಜರುಪಡಿಸಿಲ್ಲ. ಪೋಟೋಗಳಲ್ಲಿ ಕಟ್ಟಡ ನಿರ್ಮಾಣ

ಮಾಡುವುದು ಕಂಡು ಬರುವುದಿಲ್ಲ. ಮೂಲ ದಾವೆಯನ್ನು ನಡೆಸಿಕೊಂಡು ಹೋಗಬೇಕಾಗುತ್ತದೆಂದು ಸುಳ್ಳು ದಾವೆ ಸಲ್ಲಿಸಿ ದಾವೆಯನ್ನು ಮುಂದೂಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವೆ ಚಾಲ್ತಿಯಲ್ಲಿದೆ. ದಾವೆಯಲ್ಲಿ ಮುಂದುವರೆಯಲು ಯಾವುದೇ ತೊಂದರೆ ಇಲ್ಲ. ಮುಂದಿನ ಮುದ್ದತ್ತಿಗೆ ಸಾಕ್ಷಿ ವಿಚಾರಣೆ ಮಾಡುತ್ತೇವೆ. ನಮ್ಮ ದಾವೆಯಲ್ಲಿ ಯಾವುದೇ ಹುರುಳು ಇಲ್ಲ ಎಂದು ಈ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**